25th July 2008

ರಾಜ್ಯದಲ್ಲಿ ರಸಗೊಬ್ಬರ ಕೊರತೆಯ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 61(239)

ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)

ಉತ್ತರಿಸುವ ಸಚಿವರು : ಶ್ರೀ ಎಸ್.ವಿ. ರವೀಂದ್ರನಾಥ್ (ಕೃಷಿ ಸಚಿವರು)

ಕ್ರ.ಸಂ.	ಪ್ರಶ್ನೆ
ಅ)	ಕಳೆದ ಒಂದು ವರ್ಷದಿಂದ ಈವರೆಗಿನ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ರಸಗೊಬ್ಬರದ ಪ್ರಮಾಣವೆಷ್ಟು? ಪ್ರಸಕ್ತ ಅವಧಿಯಲ್ಲಿ ರಾಜ್ಯ ಸರ್ಕಾರವು ಎಷ್ಟು ಪ್ರಮಾಣದ ಗೊಬ್ಬರಕ್ಕೆ ಬೇಡಿಕೆಯನ್ನು ಸಲ್ಲಿಸಲಾಗಿತ್ತು.
ಉತ್ತರ	2007–08 ಮುಂಗಾರು ಮತ್ತು ಹಿಂಗಾರು ಹಂಗಾಮಿನಿಂದ ಮುಂಗಾರು 2008ರ ಜುಲೈ 24. 2008 ರವರೆಗೆ ಒಟ್ಟು 38.23 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ರಸಗೊಬ್ಬರ ರಾಜ್ಯಕ್ಕೆ ಸರಬರಾಜಾಗಿದೆ. ಪ್ರಸಕ್ತ ಅವಧಿಯಲ್ಲಿ ರಾಜ್ಯ ಸರ್ಕಾರದಿಂದ ಒಟ್ಟು 54.93 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ರಸಗೊಬ್ಬರ ಬೇಡಿಕೆಯನ್ನು ಸಲ್ಲಿಸಲಾಗಿತ್ತು. During 2007-08 in Kharif & Rabi seasons and till 24.07.2008 of Kharif 2008. totally 38.23 lakh m. tones of fertilizers have been supplied to the State. During this period . the State Government had submitted the requirement for 54.93 lakh m. tones of fertilizers.

ಕ್ರ.ಸಂ.	ಪ್ರಶ್ನೆ
ಆ)	ರಾಜ್ಯಕ್ಕೆ ಪ್ರಸಕ್ತ ಸಾಲಿಗೆ ಎಷ್ಟು ಪ್ರಮಾಣದ ರಸಗೊಬ್ಬರ ಅವಶ್ಯಕತೆ ಇದೆ. ಈ ಪೈಕಿ ಇಲ್ಲಿಯವರೆವಿಗೆ ರಾಜ್ಯಕ್ಕೆ ಬಂದಿರುವ ರಸಗೊಬ್ಬರದ ಪ್ರಮಾಣವೆಷ್ಟು, ಇನ್ನೂ ಬರಬೇಕಾದ ಗೊಬ್ಬರದ ಪ್ರಮಾಣವೆಷ್ಟು ಇದನ್ನು ಪಡೆದುಕೊಳ್ಳಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ.

ಉತ್ತರ

ರಾಜ್ಯಕ್ಕೆ ಪ್ರಸಕ್ತ ವರ್ಷದಲ್ಲಿ ಮುಂಗಾರು 2008ಕ್ಕೆ 20.9 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಬೇಡಿಕೆ ಇರುತ್ತದೆ. ದಿ;27.07.08ರ ಅಂತ್ಯಕ್ಕೆ ರಾಜ್ಯಕ್ಕೆ ಬಂದಿರುವ ಡಿ.ಎ.ಪಿ. ಎಂ.ಒ.ಪಿ. ಎನ್.ಪಿ.ಕೆ ಮತ್ತು ಯೂರಿಯಾ ಪ್ರಮಾಣವು 10.56 ಲಕ್ಷ ಮೆಟ್ರಿಕ್ ಟನ್‌ಗಳಿಷ್ಟಿರುತ್ತವೆ. (ಅನುಬಂಧ. ಪುಟ–1 ರಿಂದ 3) ಇನ್ನು 9.21 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಡಿ.ಎ.ಪಿ. ಎಂ.ಒ.ಪಿ. ಎನ್.ಪಿ.ಕೆ ಮತ್ತು ಯೂರಿಯಾ ಗೊಬ್ಬರ ಮುಂಗಾರು ಹಂಗಾಮಿಗೆ ಬರಬೇಕಾಗಿದೆ. ಕೇಂದ್ರ ಸರ್ಕಾರಕ್ಕೆ ಪದೇ ಪದೇ ರಾಜ್ಯದ ಬೇಡಿಕೆ ಆಧಾರದ ಮೇಲೆ ಸರಬರಾಜು ಮಾಡಲು ಕೋರಲಾಗುತ್ತಿದೆ.

During Kharif2008. the requirement of fertilzers is 20.92 lakh Metric tones. Totally 10.56 lakh Metric tones of DAP. MOP. NPK & Urea have been supplied up to 24th july 08 (Annexure. page-1 to 3). And still 9.21 lakh m. tones of DAP. MOP. NPK & Urea fertiliaers is to be supplied. The Government of India is being repeatedly requested to supply as per the requirement.

ಕ್ರ.ಸಂ.	ಪ್ರಶ್ನೆ
ಇ)	ಈಗ ದಾಸ್ತಾನಿರುವ ಗೊಬ್ಬರದ ಪೈಕಿ ಪ್ರತಿ ಜಿಲ್ಲೆಗೆ ಎಷ್ಟು ಪ್ರಮಾಣದ ರಸಗೊಬ್ಬರವನ್ನು ವಿತರಣೆ ಮಾಡಲಾಗಿದೆ. (ಕಳೆದ 2 ತಿಂಗಳಿನ ಅಂಕಿ ಅಂಶಗಳನ್ನು ಒದಗಿಸುವುದು)

ಉತ್ತರ

ಏಪ್ರಿಲ್ 2008ರ ಮಾಹೆಯಿಂದ ಜುಲೈ 24. 2008ರ ಅಂತ್ಯದವರೆಗೆ ಸರಬರಾಜು ವಿವರವನ್ನು ಅನುಬಂಧ. ಪುಟ–1 ರಿಂದ 3 ರಲ್ಲಿ ನೀಡಲಾಗಿದೆ.

The District-wise details with respect to supplies from April -08 to july 24th 2008 are furnished in Annexure. pages -1 to 3.

ಕ್ರಸಂ.	ಪ್ರಶ್ನೆ
ಈ)	ರಸಗೊಬ್ಬರವನ್ನು ಜಿಲ್ಲೆಗಳಿಗೆ ಸರಿಯಾಗಿ ವಿತರಣೆ ಮಾಡದಿರುವುದು ಹಾಗೂ ಕೆಲವು ಸ್ಥಳಗಳಲ್ಲಿ ರಸಗೊಬ್ಬರವನ್ನು ಕಾಳ ಸಂತೆಯಲ್ಲಿ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ.

ಉತ್ತರ

ಹೌದು. ಗಮನಕ್ಕೆ ಬಂದಿದೆ.

Yes. It has been noticed.

ಕ್ರಸಂ.	ಪ್ರಶ್ನೆ
ಉ)	ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು (ವಿವರ ನೀಡುವುದು)

ಉತ್ತರ

ವಿವಿಧ ಕಂಪನಿಗಳ ಮಾರಾಟಗಾರರಿಂದ ಸಮಾನತೆ ಮತ್ತು ಪಾರಾದರ್ಶಕ ರೀತಿಯಲ್ಲಿ ರಸಗೊಬ್ಬರ ಮಾರಾಟ ಮಾಡಲು. ಎಲ್ಲಾ ರೀತಿಯ ಅನುಕೂಲತೆಯನ್ನು ನೀಡಲು ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ ಮತ್ತು ಅಕ್ರಮ ದಾಸ್ತಾನು ಮತ್ತು ಕಾಳಸಂತೆ ಮಾರಾಟಗಾರರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ. ಯಾವುದಾದರೂ ಅಕ್ರಮ ವ್ಯವಹಾರದಲ್ಲಿ ತೊಡಗಿರುವವರ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿದಲ್ಲಿ ಅಂತಹವರಿಗೆ ರೂ. 10.000/– ಗಳ ಬಹುಮಾನವನ್ನು ನೀಡುವುದಾಗಿಉ ಸಹ ಘೋಷಿಸಿರುತ್ತೇವೆ.

The district administration has been instructed to faciliate sale of fertilizers by dealers of various companies in an equitable and transparent manner. Further they have been asked against hoarding & black marketing in the district. The government has to announced the reward of Rs. 10.000/- to whoever gives information about illegal of hoarding of fertilizers.

ವಿಧಾನ ಸಭೆ ಪ್ರಶ್ನೆ ಸಂಖ್ಯೆ – 239

ಅನುಬಂಧ

ರಾಜ್ಯದ ಮುಂಗಾರು 2008 ರಲ್ಲಿ ಏಪ್ರಿಲ್ ಮಾಹೆಯಿಂದ
ಜುಲೈ 24, 2008 ರವರೆಗೆ ಕೇಂದ್ರ ಸರ್ಕಾರದಿಂದ
ಸರಬರಾಜಾದ ರಸಗೊಬ್ಬರದ ವಿವರ (ಟನ್‌ಗಳಲ್ಲಿ)

ಕ್ರಸಂ.	ಜಿಲ್ಲೆ	ಗ್ರೇಡ್	ಕೇಂದ್ರ ಸರ್ಕಾರದಿಂದ ಆದ ಸರಬರಾಜು ಪ್ರಮಾಣ (ಏಪ್ರಿಲ್–08 ರಿಂದ ಜುಲೈ 24. 2008)
1	ಬಾಗಲಕೋಟೆ	ಡಿ.ಎ.ಪಿ	7.954
		ಎಂ.ಒ.ಪಿ	6.937
		ಎನ್.ಪಿ.ಕೆ	3.848
		ಯೂರಿಯಾ	17.514
2	ಬೆಂಗಳೂರು (ಗ್ರಾ)	ಡಿ.ಎ.ಪಿ	3.858
		ಎಂ.ಒ.ಪಿ	4.439
		ಎನ್.ಪಿ.ಕೆ	2.179
		ಯೂರಿಯಾ	5.872
3	ಬೆಂಗಳೂರು (ನಗರ)	ಡಿ.ಎ.ಪಿ	1.919
		ಎಂ.ಒ.ಪಿ	1.648
		ಎನ್.ಪಿ.ಕೆ	7.314
		ಯೂರಿಯಾ	6.912
4	ಬೆಳಗಾಂ	ಡಿ.ಎ.ಪಿ	19.380
		ಎಂ.ಒ.ಪಿ	22.361
		ಎನ್.ಪಿ.ಕೆ	17.551
		ಯೂರಿಯಾ	42.278
5	ಬಳ್ಳಾರಿ	ಡಿ.ಎ.ಪಿ	17.541
		ಎಂ.ಒ.ಪಿ	7.873
		ಎನ್.ಪಿ.ಕೆ	14.190

		ಯೂರಿಯಾ	35.158
6	ಬೀದರ್	ಡಿ.ಎ.ಪಿ	13.032
		ಎಂ.ಓ.ಪಿ	1.173
		ಎನ್.ಪಿ.ಕೆ	2.491
		ಯೂರಿಯಾ	3.390
7	ಬಿಜಾಪುರ	ಡಿ.ಎ.ಪಿ	9.635
		ಎಂ.ಓ.ಪಿ	2.009
		ಎನ್.ಪಿ.ಕೆ	7.555
		ಯೂರಿಯಾ	13.110
8	ಚಾಮರಾಜನಗರ	ಡಿ.ಎ.ಪಿ	1.541
		ಎಂ.ಓ.ಪಿ	4.695
		ಎನ್.ಪಿ.ಕೆ	2.780
		ಯೂರಿಯಾ	6.701
9	ಚಿಕ್ಕಮಗಳೂರು	ಡಿ.ಎ.ಪಿ	7.577
		ಎಂ.ಓ.ಪಿ	11.242
		ಎನ್.ಪಿ.ಕೆ	12.786
		ಯೂರಿಯಾ	17.415
10	ಚಿಕ್ಕಬಳ್ಳಾಪುರ	ಡಿ.ಎ.ಪಿ	2.289
		ಎಂ.ಓ.ಪಿ	796
		ಎನ್.ಪಿ.ಕೆ	2.653
		ಯೂರಿಯಾ	4.856
11	ಚಿತ್ರದುರ್ಗ	ಡಿ.ಎ.ಪಿ	8.958
		ಎಂ.ಓ.ಪಿ	2.084
		ಎನ್.ಪಿ.ಕೆ	6.364
		ಯೂರಿಯಾ	4.876
12	ದಾವಣಗೆರೆ	ಡಿ.ಎ.ಪಿ	19.163
		ಎಂ.ಓ.ಪಿ	4.733

		ಎನ್.ಪಿ.ಕೆ	18.498
		ಯೂರಿಯಾ	23.389
13	ಧಾರವಾಡ	ಡಿ.ಎ.ಪಿ	15.581
		ಎಂ.ಒ.ಪಿ	6.737
		ಎನ್.ಪಿ.ಕೆ	9.327
		ಯೂರಿಯಾ	14.285
14	ಗದಗ	ಡಿ.ಎ.ಪಿ	7.154
		ಎಂ.ಒ.ಪಿ	1.593
		ಎನ್.ಪಿ.ಕೆ	3.109
		ಯೂರಿಯಾ	5.080
15	ಗುಲ್ಬರ್ಗಾ	ಡಿ.ಎ.ಪಿ	28.556
		ಎಂ.ಒ.ಪಿ	6.068
		ಎನ್.ಪಿ.ಕೆ	3.595
		ಯೂರಿಯಾ	21.982
16	ಹಾಸನ	ಡಿ.ಎ.ಪಿ	10.035
		ಎಂ.ಒ.ಪಿ	12.607
		ಎನ್.ಪಿ.ಕೆ	19.397
		ಯೂರಿಯಾ	22.694
17	ಹಾವೇರಿ	ಡಿ.ಎ.ಪಿ	14.828
		ಎಂ.ಒ.ಪಿ	7.620
		ಎನ್.ಪಿ.ಕೆ	6.612
		ಯೂರಿಯಾ	18.925
18	ಕೊಡಗು	ಡಿ.ಎ.ಪಿ	3.162
		ಎಂ.ಒ.ಪಿ	9.162
		ಎನ್.ಪಿ.ಕೆ	6.696
		ಯೂರಿಯಾ	8.616
19	ಕೋಲಾರ	ಡಿ.ಎ.ಪಿ	1.931

		ಎಂ.ಓ.ಪಿ	1.206
		ಎನ್.ಪಿ.ಕೆ	6.700
		ಯೂರಿಯಾ	3.991
20	ಕೊಪ್ಪಳ	ಡಿ.ಎ.ಪಿ	8.315
		ಎಂ.ಓ.ಪಿ	5.699
		ಎನ್.ಪಿ.ಕೆ	5.277
		ಯೂರಿಯಾ	23.616
21	ಮಂಡ್ಯ	ಡಿ.ಎ.ಪಿ	3.485
		ಎಂ.ಓ.ಪಿ	9.478
		ಎನ್.ಪಿ.ಕೆ	14.273
		ಯೂರಿಯಾ	29.405
22	ಮೈಸೂರು	ಡಿ.ಎ.ಪಿ	10.159
		ಎಂ.ಓ.ಪಿ	9.121
		ಎನ್.ಪಿ.ಕೆ	10.567
		ಯೂರಿಯಾ	15.483
23	ಉತ್ತರ ಕನ್ನಡ	ಡಿ.ಎ.ಪಿ	1.407
		ಎಂ.ಓ.ಪಿ	1.238
		ಎನ್.ಪಿ.ಕೆ	2.172
		ಯೂರಿಯಾ	2.905
24	ರಾಯಚೂರು	ಡಿ.ಎ.ಪಿ	14.235
		ಎಂ.ಓ.ಪಿ	6.282
		ಎನ್.ಪಿ.ಕೆ	11.486
		ಯೂರಿಯಾ	31.491
25	ರಾಮನಗರ	ಡಿ.ಎ.ಪಿ	701
		ಎಂ.ಓ.ಪಿ	160
		ಎನ್.ಪಿ.ಕೆ	928
		ಯೂರಿಯಾ	2.404

0-220-6

26	ಶಿವಮೊಗ್ಗ	ಡಿ.ಎ.ಪಿ	8.173
		ಎಂ.ಒ.ಪಿ	7.114
		ಎನ್.ಪಿ.ಕೆ	18.468
		ಯೂರಿಯಾ	18.211
27	ದಕ್ಷಿಣ ಕನ್ನಡ	ಡಿ.ಎ.ಪಿ	551
		ಎಂ.ಒ.ಪಿ	2.166
		ಎನ್.ಪಿ.ಕೆ	3.902
		ಯೂರಿಯಾ	2.467
28	ತುಮಕೂರು	ಡಿ.ಎ.ಪಿ	4.330
		ಎಂ.ಒ.ಪಿ	3.169
		ಎನ್.ಪಿ.ಕೆ	12.178
		ಯೂರಿಯಾ	10.777
29	ಉಡುಪಿ	ಡಿ.ಎ.ಪಿ	376
		ಎಂ.ಒ.ಪಿ	665
		ಎನ್.ಪಿ.ಕೆ	1.951
		ಯೂರಿಯಾ	1.285
	ಒಟ್ಟು	**ಡಿ.ಎ.ಪಿ**	**245.823**
		ಎಂ.ಒ.ಪಿ	**160.074**
		ಎನ್.ಪಿ.ಕೆ	**234.848**
		ಯೂರಿಯಾ	**415.085**
	ಮಹಾ ಮೊತ್ತ		**1.055.831**

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಉತ್ತರ ಒದಗಿಸಿದ್ದಾರೆ. ಗೊಬ್ಬರ ಎಷ್ಟು ಬೇಕಾಗಿದೆಯೋ ಅಷ್ಟನ್ನು ರಾಜ್ಯದಲ್ಲಿ ತರಿಸಲಿಕ್ಕಾಗಲಿಲ್ಲ. Fertilizer ಬಹಳ Shortage ಇದೆ. ಏಕೆಂದರೆ. ಯಾವ್ಯಾವ ಕಂಪನಿಯಿಂದ ತರಿಸಬೇಕೋ. ಆ ಕಂಪನಿಯಿಂದ ತರಿಸುವುದಕ್ಕಾಗುತ್ತಿಲ್ಲ. ಎಲ್ಲದಕ್ಕೂ ಮುಖ್ಯವಾಗಿ. ಮಾರಾಟ ಮಹಾ ಮಂಡಳ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರವನ್ನು ತರಿಸುತ್ತದೆ. ಅದಕ್ಕೆ ಮಹಾರಾಷ್ಟ್ರದಲ್ಲಿ 500 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಆಂಧ್ರದಲ್ಲಿ 150 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ನಮ್ಮ ಕರ್ನಾಟಕದಲ್ಲಿ ಕೇವಲ ರೂ.ಗಳನ್ನು Federation ಗೆ ಕೊಟ್ಟಿದ್ದಾರೆ. ವರ್ಷಕ್ಕೆ ಆ Feeeration ಗೆ ನಮ್ಮ ರಾಜ್ಯ ಸರ್ಕಾರ 250 ಕೋಟಿ ರೂ.ಗಳನ್ನು ಕೊಟ್ಟಿದ್ದರೆ. 250 ಕೋಟಿ ರೂ.ಗಳನ್ನು ಅವರು ಬೇರೆ ಕಡೆಯಿಂದ ಸಾಲ ತೆಗೆದುಕೊಂಡು. 500 ಕೋಟಿ ರೂ.ಗಳ ಗೊಬ್ಬರವನ್ನು ತರಿಸುತ್ತಿದ್ದರು. ಆ ಗೊಬ್ಬರ ಸಾಲುತ್ತಿತ್ತು. Problem ಏನಾಗಿದೆ ಎಂದರೆ, ಎಲ್ಲಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರ ತರಿಸತಕ್ಕಂಥ Agency ಯಾವುದೆಂದರೆ ಅದು ಮಾರಾಟ ಮಹಾಂಡಳಿ. ಮಾರಾಟ ಮಹಾ ಮಂಡಳಿಯವರಿಗೆ ಸರ್ಕಾರದವರು ಹಣ ಕೊಟ್ಟಿಲ್ಲ. ಅವರು ಮೊನ್ನೆ. urgent ಆಗಿ 50 ಕೋಟಿ ರೂ.ಗಳನ್ನು ಕೊಡಿ ಗೊಬ್ಬರ ತರಿಸಬೇಕಾಗಿದೆ. ಸಮಸ್ಯೆ ಇದೆ ಎಂದು ಹೇಳಿದರೆ. ರಾಜ್ಯ ಸರ್ಕಾರ 17 ಕೋಟಿ ರೂ.ಗಳನ್ನು Sanction ಮಾಡಿ, 8 ಕೋಟಿ ರೂ.ಗಳನ್ನು ಕೊಟ್ಟರು. ಅಂಥ ಪರಿಸ್ಥಿತಿಯಲ್ಲಿಯೂ ಮಾರಾಟ ಮಹಾ ಮಂಡಳಿ ತರಿಸುವುದಕ್ಕಾಗಲಿಲ್ಲ. ಇವೆಲ್ಲ ಕಾರಣಗಳಿಂದ. ಗೋಲಿಬಾರ್, ತುಮಕೂರಿನಲ್ಲಿ ನಿನ್ನೆ ಗಲಾಟೆ ಆಯಿತು.

ಅಧ್ಯಕ್ಷರು : ಗುರುಪಾದಪ್ಪನವರೆ, specific ಆಗಿ ಪ್ರಶ್ನೆ ಕೇಳಿ. ಬಜೆಟ್ ಮೇಲೆ ಚರ್ಚೆ ಮಾಡುವಾಗ ವಿವರವಾಗಿ ಹೇಳಬಹುದು. ಅವರ ಕಡೆಯಿಂದ ನೀವೇನು expect ಮಾಡುತ್ತೀರಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸರ್ಕಾರದ ಕಡೆಯಿಂದ ಈಗ ಹೊಲಸಾಗುವುದೆಲ್ಲ ಆಗಿ ಹೋಗಿದೆ. ಈಗ ಏನೇನಾಗಬೇಕೋ ಎಲ್ಲ ಆಗಿದೆ. ಹಾವೇರಿಯಲ್ಲಿ ಗೋಲಿಬಾರ್ ಆಯಿತು. ನಿನ್ನೆ ತುಮಕೂರಿನಲ್ಲಿ ಗಲಾಟೆಯಾಯಿತು. ಹೀಗಾಗಿ. ಇನ್ನೂ ಸರಿ ಹೋಗಲಿಲ್ಲ ಇನ್ನೂ ಎಲ್ಲ ಕಡೆ ಗಲಾಟೆ ನಡೆಯುತ್ತಿದೆ. ಮುಂದೆಯೂ ಗಲಾಟೆ ನಡೆಯಲಾರದ ಹಾಗೆ ಮಾಡಬೇಕಾದರೆ. ಇವರು advance ಆಗಿ ಯಾವ್ಯಾವ Agency ಗಳು ಇರುತ್ತವೆ. ಅವರಿಗೆ ಹಣವನ್ನೇನು ಕೊಡುತ್ತಾರೆ. ಎಲ್ಲ ಹಿಂದಿನಿಂದ ಯಾವ ರೀತಿ ನಡೆದುಕೊಂಡು ಬಂದಿದೆಯೋ ಆ ಪ್ರಕಾರ ನೀವು ಹಣ ಕೊಡಬೇಕು. ನೀವು ಅವರಿಗೆ ಹಣವನ್ನೇ Sanction

ಮಾಡದೇ ಕೇಂದ್ರ ಸರ್ಕಾರದವರು ಬೇಕಾದಷ್ಟು ಗೊಬ್ಬರ ಕಳುಹಿಸಿದ್ದಾರೆ. ನಾನು IFFCO ದಲ್ಲಿದ್ದೀನಿ.

ಅಧ್ಯಕ್ಷರು : ಗುರುಪಾದಪ್ಪನವರೆ. ನೇರವಾಗಿ ಪ್ರಶ್ನೆ ಕೇಳಿ. ಇದು question Hour. ನೀವು ಬಜೆಟ್ ಮೇಲೆ ಮಾತನಾಡುವಾಗ ವಿವರವಾಗಿ ಮಾತನಾಡಿ. Detail ಆಗಿ ಇಲ್ಲಿ ಮಾತನಾಡಬೇಡಿ. ಬಜೆಟ್ ಮೇಲೆ ಮಾತನಾಡುವಾಗ ನಿಮಗೆ ನಾನು ಅವಕಾಶ ಕೊಡುತ್ತೇನೆ. ಅವರಿಗೆ Specific ಆಗಿ ಪ್ರಶ್ನೆ ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಏಕೆ ಹಾಗಾಗಿದೆ ಎಂದು ಹೇಳುತ್ತಿದ್ದೇನೆ. ಈಗ ತಾವು ಮಾರಾಟ ಮಹಾ ಮಂಡಳಿಗೆ ಹಣ ಕೊಟ್ಟರೆ. ಅವರು ಗೊಬ್ಬರ ತರಿಸುತ್ತಾರೆ. ಮುಂದೆ ಪರಿಸ್ಥಿತಿ ಗಂಭೀರವಾಗುವುದಿಲ್ಲ. ಮುಂದಿನ ಸಲ ಬೇಕಾದರೆ. ಅವರಿಗೆ ಕನಿಷ್ಟ 250 ಕೋಟಿ ರೂ.ಗಳನ್ನು ಕೊಟ್ಟರೆ ಅವರು ಗೊಬ್ಬರ ತರಿಸುತ್ತಾರೆ. ಇಲ್ಲವೆಂದರೆ. ನೀವು ಕಳೆದ ಸಾರಿ ಮಾಡಿದ ಹಾಗೆ ಮಾಡಿದರೆ. ಮತ್ತೆ ಮುಂದೆ ಗೋಲಿಬಾರ್ ಆಗುತ್ತದೆ. ಅದಕ್ಕಾಗಿ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು. ಗೊಬ್ಬರವನ್ನು ಯಾವ್ಯಾವ Agencyಯವರ ಹತ್ತಿರ ಮೊದಲೇ ಮಾತನಾಡಿ. ಏನೇನು ತರಿಸಬೇಕೆಂದು decide ಮಾಡಿ ತರಿಸಬೇಕು. ಏಕೆಂದರೆ. ಕೇಂದ್ರ ಸರ್ಕಾರದವರು ಎಷ್ಟು ಬೇಕೋ ಅಷ್ಟು ಕಳುಹಿಸಿದ್ದೇವೆಂದು ಹೇಳುತ್ತಾರೆ. ಈಗ ಅದರ ಪತ್ರ ನನ್ನ ಹತ್ತಿರವಿದೆ. ನಾವು ಕೇಳಿದಷ್ಟು ಕಳುಹಿಸಿಲ್ಲವೆಂದು ನೀವು ಹೇಳುತ್ತೀರಿ. ಅವರು ಕಳುಹಿಸಿದ್ದಾರೆ. ನೀವು ಅವರಿಗೆ ಹಣ ಕೊಟ್ಟಿಲ್ಲ. ಗೊಬ್ಬರ ಕಂಪನಿಗಳಿಗೆ ಹಣ ಕೊಡದೆ. ಯಾವ ಕಂಪನಿಯೂ ನಮಗೆ ಗೊಬ್ಬರ ಕೊಡುವುದಿಲ್ಲ. ಆ ಕಂಪನಿಗಳಿಗೆ ಮೊದಲು ಹಣ ಕೊಡಬೇಕಾಗುತ್ತದೆ. ಯಾವ Agency ಮುಖಾಂತರ ಕೊಡುತ್ತೀರೋ ಅದೆಲ್ಲ ನಿಮಗೆ ಬಿಟ್ಟಿದ್ದು. ಅದಕ್ಕಾಗಿ ಇದರ ಬಗ್ಗೆ ಮೊದಲೇ ಪೂರ್ವಭಾವಿಯಾಗಿ ವ್ಯವಸ್ಥೆ ಮಾಡಿಕೊಳ್ಳಿ. ಈ ಗೋಲಿಬಾರ್ ಮುಂದಿನ ವರ್ಷವೂ ಆಗುವ ಸಾಧ್ಯತೆ ಇದೆ. ಆದ್ದರಿಂದ ಇದರ ಬಗ್ಗೆ ಕಾಳಜಿ ತೆಗೆದುಕೊಂಡು ಈಗಲೇ ಏನಾದರೂ ಮಾಡಿದರೆ ಮುಂದೆ ಉಳಿದುಕೊಳ್ಳುತ್ತೀರಿ. ಇಲ್ಲದಿದ್ದರೆ ತಾವು ಮುಂದೆ ಉಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಮಾತನ್ನು ಖಡಾ ಖಂಡಿತವಾಗಿ ಹೇಳುತ್ತಿದ್ದೇನೆ. ಇದನ್ನು ತಾವು ಮಾಡಲೇ ಬೇಕು. ಇಲ್ಲದಿದ್ದರೆ ಮೊನ್ನೆ ತುಮಕೂರಿನಲ್ಲಿ ಗೋಲಿಬಾರ್ ಆಯಿತು. ನಾಳೆ ಮತ್ತೊಂದು ಊರು. ನಾಡಿದ್ದು ಇನ್ನೊಂದು ಊರಿನಲ್ಲಿ ಆಗುತ್ತದೆ. ದಿನಾ ಒಂದೊಂದು ಕಡೆ ಆಗುತ್ತದೆ. ನೀವು ಅವರು ಕೊಟ್ಟಿಲ್ಲ. ನಾವು ತಂದಿಲ್ಲ ಎಂದು ಉತ್ತರ ಕೊಡುವುದು ಬೇಡ. ಯಾರು ಕೊಟ್ಟಿಲ್ಲ. ಯಾರು ತಂದಿಲ್ಲ ಎಂಬುದಲ್ಲ. ನೀವು ಅದನ್ನು ಮಾಡತಕ್ಕ

ಅವಶ್ಯಕತೆ ಇದೆ. ತಾವು ಮೊದಲು ದುಡ್ಡನ್ನು ಕೊಡಿ. ತಾವು ದುಡ್ಡನ್ನೇ ಕೊಡುವುದಿಲ್ಲ. ಇಷ್ಟು ತಂದಿದ್ದೇವೆ. ಅಷ್ಟು ತಂದಿದ್ದೇವೆ ಎಂದು ಎಲ್ಲಾ ಹೇಳಿದಿರಿ. ಆದರೆ ತಾವು ಕೊಟ್ಟಿರುವ ಉತ್ತರವನ್ನು ನೋಡಿದರೆ ಅದು ಸುಳ್ಳು ಉತ್ತರವಾಗಿದೆ. ಏಕೆಂದರೆ ಕೇಂದ್ರ ಸರ್ಕಾರದವರು ಗೊಬ್ಬರವನ್ನು ಅದಕ್ಕಾಗಿಯೇ ಹೆಚ್ಚು ಕೊಟ್ಟಿದ್ದಾರೆ.

ಅಧ್ಯಕ್ಷರು : ತಾವು ಅದನ್ನೇ ರಿಪೀಟ್ ಮಾಡಿದರೆ ನಾವು ಯಾವ ರೀತಿಯಾಗಿ ಪ್ರಶ್ನೋತ್ತರವನ್ನು ನಡೆಸಬೇಕು? ಅವರು ಕೊಟ್ಟಿಲ್ಲ. ಕೊಟ್ಟಿಲ್ಲವೆಂದರೆ ಹೇಗೆ? ನೇರವಾದ ಪ್ರಶ್ನೆಯನ್ನು ಕೇಳಿ. ತಾವು ಹಿರಿಯರಿದ್ದೀರಿ. ಹೀಗಾದರೆ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ;, ಅವರು ಅದನ್ನು ಕೊಟ್ಟು ಸರಿ ಮಾಡಿಲ್ಲ. ಆದ್ದರಿಂದ ಅವರು ಅದನ್ನು ಹೇಳಲಿ.

ಶ್ರೀ ಎಸ್.ಎ. ರವೀಂದ್ರನಾಥ್ ; ಕರ್ನಾಟಕ ರಾಜ್ಯಕ್ಕೆ ಪ್ರತಿ ವರ್ಷ ಎಷ್ಟೆಷ್ಟು ಗೊಬ್ಬರ ಬೇಕು ಎಂಬ ಬಗ್ಗೆ ರಾಜ್ಯ ಸರ್ಕಾರದಿಂದ ಮಾಹಿತಿ ಹೋಗುತ್ತದೆ. ಈ ವರ್ಷ ಸಹ 20 ಲಕ್ಷದ 92 ಸಾವಿರ ಟನ್ ಗೊಬ್ಬರ ನಮ್ಮ ರಾಜ್ಯಕ್ಕೆ ಅವಶ್ಯಕತೆ ಇರತಕ್ಕದ್ದು. ಆದರೆ ನಮಗೆ ಬಂದಿರುವ ರಾಸಾಯನಿಕ ಗೊಬ್ಬರ 2 ಲಕ್ಷದ 42 ಸಾವಿರದ 775 ಸಾವಿರ ಟನ್. ಅಂದರೆ ನಮಗೆ ಇನ್ನೂ ಜೂನ್ ಜುಲೈ ತಿಂಗಳಿನಲ್ಲಿ ಲಕ್ಷದ 74 ಸಾವಿರ ಟನ್ ಗೊಬ್ಬರವೇನು ಬರಬೇಕಾಗಿತ್ತು. ಅದರಲ್ಲಿ 2 ಲಕ್ಷದ 42 ಸಾವಿರದ 775 ಟನ್ ಮಾತ್ರ ಬಂದಿದೆ. ಆದರೆ ಹಣಕಾಸಿನ ಬಗ್ಗೆ ಹೇಳುವುದಾದರೆ. ನಮ್ಮ ಮುಖ್ಯಮಂತ್ರಿಯವರು ವಿಧಾನಸೌಧದಲ್ಲಿ ಕರೆದಿದ್ದ ಸಬೆಯಲ್ಲಿ ನಾನು 500 ಕೋಟಿ ಹಣವನ್ನು ಕೊಡುತ್ತೇನೆ. ನೀವು ರಾಸಾಯನಿಕ ಗೊಬ್ಬರದ ತೊಂದರೆ ಇಲ್ಲದಂತೆ ಮಾಡಿ ಎಂದು ಎಲ್ಲರಲ್ಲೂ ಹೇಳಿದರು. ಅದೇ ರೀತಿ ನಿಮಗೆಲ್ಲ ಗೊತ್ತಿದ್ದಂತೆ ನಮ್ಮ ಮುಖ್ಯಮಂತ್ರಿಯವರು ಮುಖ್ಯಮಂತ್ರಿ ಆದ ಎರಡನೇ ದಿವಸವೇ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿದ್ದಾರೆ. ಹಾಗೆಯೇ ರಾಸಾಯನಿಕ ಮತ್ತು ಗೊಬ್ಬರದ ಕೇಂದ್ರ ಸಚಿವರಾದ ರಾಮ್‌ವಿಲಾಸ್ ಪಾಸ್ವಾನ್‌ರವರನ್ನು ಭೇಟಿ ಮಾಡಿದ್ದಾರೆ. ಪುನಃ 11ನೇ ತಾರೀಖು ನಾವೆಲ್ಲರೂ ಹತ್ತಾರು ಜನ ಸಚಿವರು ಮುಖ್ಯಮಂತ್ರಿಯವರ ಸಮಕ್ಷಮದಲ್ಲಿ ಹೋಗಿದ್ದೇವೆ. ಅದೇ ರೀತಿ ಜುಲೈ ತಿಂಗಳಿನಲ್ಲಿ ಎಲ್ಲಾ ಪಕ್ಷದ ನಾಯಕರೊಂದಿಗೆ ಪ್ರಧಾನ ಮಂತ್ರಿಯವರನ್ನು ಕಾಣಬೇಕು ಎಂದು ಭೇಟಿ ಮಾಡಿ ನಮ್ಮ ರಾಜ್ಯದ ಸ್ಥಿತಿಗತಿಯನ್ನು ತಿಳಿಸಿಬಂದಿದ್ದೇವೆ. ಆದರೂ ನಮಗೆ ಕೊಟ್ಟಿರುವ ರಾಸಾಯನಿಕ ಗೊಬ್ಬರ ಇಷ್ಟೆಯೇ. ಆದರೆ ಇವತ್ತು ರಾಜ್ಯದ ಎಲ್ಲಾ ಭಾಗದಲ್ಲೂ ಇದರ ಕೊರತೆ ಇದೆ. ಈಗ ಮಾನ್ಯ ನಾಗಮಾರಪ್ಪಲ್ಲಿಯವರು ಹಣದ ವ್ಯವಸ್ಥೆ ಬಗ್ಗೆ

ಹೇಳಿದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಮಾತನಾಡಿ ತಿಳಿಸುವಂಥ ಕೆಲಸ ಮಾಡುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಮಂತ್ರಿಯವರು ಇನ್ನು 4 ಲಕ್ಷ ಟನ್ ಗೊಬ್ಬರದ ಕೊರತೆ ಇದೆಯೆಂದು ಉತ್ತರವನ್ನು ಕೊಟ್ಟರು. ಆದರೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ 21.06.2008 ರಂದು ಪತ್ರವನ್ನು ಬರೆದು ನಮಗೆ 500 ಕೋಟಿ ಇಲ್ಲದಿದ್ದರೆ 250 ಕೋಟಿ ಹಣವನ್ನು ಬಿಡುಗಡೆ ಮಾಡಿದರೆ ನಿಮಗೆ ರಸಗೊಬ್ಬರವನ್ನು ಸರಬರಾಜು ಮಾಡುತ್ತೇವೆಂದು ತಿಳಿಸಿದ್ದಾರೆ. ಅದಕ್ಕೆ ಇವರು ಕೊಟ್ಟಿರುವುದು ಕೇವಲ 8 ಕೋಟಿ ಮಾತ್ರ. ಬಾಕಿ ಹಣವನ್ನು ಬಿಡುಗಡೆ ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಹಿಂದಿನ ಅಧಿವೇಶನದಲ್ಲಿ ನಾನು 500 ಕೋಟಿಗೆ ಡಿಮ್ಯಾಂಡ್ ಡ್ರಾಫ್ಟ್ ಕೊಡುತ್ತೇನೆ. ನೀವು ಗೊಬ್ಬರವನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದರು. ಆದರೆ ಮಹಾ ಮಂಡಳಿಯವರು ನೀವು ಹಣ ಕೊಟ್ಟರೆ ನಾವು ಸರಬರಾಜು ಮಾಡುತ್ತೇವೆಂದು ಪತ್ರವನ್ನು ಬರೆದಿದ್ದರೂ ಏತಕ್ಕಾಗಿ ಮುಖ್ಯಮಂತ್ರಿಯವರು ಇದನ್ನು ಪರಿಶೀಲನೆ ಮಾಡುತ್ತಿಲ್ಲ? ಇದೇ ಮಾರಾಟ ಮಂಡಳಿಯವರಿಗೆ ಆಂಧ್ರದವರು 500 ಕೋಟಿ. ಮಹಾರಾಷ್ಟ್ರದವರು 250 ಕೋಟಿ ಕೊಟ್ಟಿದ್ದಾರೆ. ನಮ್ಮಲ್ಲಿ ಏಕೆ ಕೊಡುತ್ತಿಲ್ಲ? ಗೊಬ್ಬರವನ್ನು ಪೂರೈಸುವ ಇಚ್ಚಾಶಕ್ತಿ ಇದೆಯೇ? ನಿನ್ನೆ ಸಹ ತುಮಕೂರಿನಲ್ಲಿ ಗೋಲಿಬಾರ್ ಆಗಿದೆ. ನನ್ನ ಕ್ಷೇತ್ರದಲ್ಲಿ ಪ್ರತಿನಿತ್ಯ ರಸ್ತೆ ತಡೆ ಮಾಡುತ್ತಿದ್ದಾರೆ. ಏತಕ್ಕಾಗಿ ಸರ್ಕಾರ ಇನ್ನೂ ಇದರ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಕೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರಾದ ಬಾಲಕೃಷ್ಣರವರು ಬಹಳ ಗಂಭೀರವಾದ ವಿಚಾರವನ್ನು ಹೇಳಿದ್ದಾರೆ. ಮಾರ್ಕೆಟಿಂಗ್ ಫೆಡರೇಷನ್‌ನವರು ಮುಖ್ಯಮಂತ್ರಿಯವರಿಗೆ ಪತ್ರವನ್ನು ಬರೆದಿದ್ದಾರೆ. ಆದರೆ ಮುಖ್ಯಮಂತ್ರಿಯವರು ದುಡ್ಡು ಕೊಟ್ಟಿಲ್ಲ ಎಂದು ಹೇಳಿದ್ದಾರೆ. ದಯಮಾಡಿ ಅದು ಯಾವ ಪತ್ರ ಎಂಬುದನ್ನು ಕಳುಹಿಸಿಕೊಡಿ. ನಾಳೆಯೇ ನಿಮಗೆ ಮೊದಲನೇ ಕಂತಾಗಿ 250 ಕೋಟಿ ರೂಪಾಯಿಗಳ ಡ್ರಾಫ್ಟ್‌ನ್ನು ಕೊಡುತ್ತೇನೆ. ದಯಮಾಡಿ ಅದೆಲ್ಲಿ ಗೊಬ್ಬರ ಕೊಡಿಸುತ್ತಿರೋ ಕೊಡಿಸಿ. ನಾನು ಈಗಾಗಲೇ ಅವರಲ್ಲಿ ವಿನಂತಿ ಮಾಡಿದಾಗ ಆ ರೀತಿ ನೇರವಾಗಿ ಗೊಬ್ಬರ ಕೊಡಲು ಬರುವುದಿಲ್ಲ ಎಂದು ಅವರು ಹೇಳಿದ್ದಾರೆ. ಗೊಬ್ಬರವನ್ನು ಒದಗಿಸುವುದು ಕೇಂದ್ರ ಸರ್ಕಾರವೇ ಹೊರತು ನೀವು ಆ ರೀತಿ ದುಡ್ಡು ಕೊಟ್ಟು ಮಾಡಲು ಬರುವುದಿಲ್ಲ ಎಂದು

ಹೇಳಿದ್ದಾರೆ. ಮಧ್ಯಪ್ರದೇಶದಲ್ಲಿ ಈಗಾಗಲೇ ಅವರು ಫೆಬ್ರವರಿಯಲ್ಲಿ ದುಡ್ಡು ಕೊಟ್ಟಿರುವುದರಿಂದ ಅವರೊಬ್ಬರಿಗೆ ಬಿಟ್ಟು ಇನ್ನು ಯಾರಿಗೂ ಕೊಟ್ಟಿಲ್ಲ. ಎರಡನೆಯದು. ಈಗಾಗಲೇ ಸಚಿವರು ಎಷ್ಟು ಗೊಬ್ಬರ ಅಗತ್ಯ ಇತ್ತು ಎಷ್ಟು ಬಂದಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಹೇಳಿದ್ದಾರೆ. ಎಲ್ಲಾ ರೀತಿಯ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ನಾವು ಮಾಡಿ ಆಯಿತು. ಇನ್ನು ಉಳಿದಿರುವುದು ಒಂದೇ ಒಂದು. ಅದೇನೆಂದರೆ ಈ ಅಧಿವೇಶನ ಮುಗಿದ ಮೇಲೆ. ಏಕೆಂದರೆ ಮಳೆ ಆಗುತ್ತಿದೆ. ಗೊಬ್ಬರ ಇಲ್ಲದೆ ಗೋಲಿಬಾರ್ ಆಗುತ್ತಿದೆ. ಧರಣಿ ಆಗುತ್ತಿದೆ. ನಾನು ಕೇಳುತ್ತೇನೆ. ಇವತ್ತು ನಮ್ಮ ರೈತರು ಅವರ ಸಮಸ್ಯೆಗಳನ್ನು ಕೇಳಲು ಅವರಿಗೆ ಅಧಿಕಾರ ಇದೆ. ಅವರು ಪ್ರತಿಭಟನೆ ಮಾಡಲು ಅವಕಾಶ ಇದೆ. ಹಾಗೆಂದು ರೋಡೇ ಬಂದ್ ಮಾಡಿಬಿಡುತ್ತಾರೆಯೇ? ರಸ್ತೆಯಲ್ಲಿ ವಾಹನಗಳೇ ಸಂಚಾರ ಮಾಡದಂತೆ ಕಾನೂನು ಸುವ್ಯವಸ್ಥೆ ಅಡ್ಡಿಯಾಗಿ ಆಗುವಂತೆ ಮಾಡಿದರೆ ಪರವಾಗಿಲ್ಲವೆಂದು ನೋಡಿಕೊಂಡು ಕುಳಿತುಕೊಳ್ಳಲು ಆಗುತ್ತದೆಯೇ? ರೈತರು ತೊಂದರೆಯಲ್ಲಿದ್ದಾರೆ ಆದ್ದರಿಂದ. ಅವರ ಮೇಲೆ ದಬ್ಬಾಳಿಕೆ ಮಾಡಕೂಡದು ಎಂದು ನಾನು ಸೂಚನೆ ಕೊಟ್ಟಿರತಕ್ಕದ್ದು. ಆದರೆ ರೈತರಲ್ಲದ ಕೆಲವರು ಅದನ್ನು ದುರುದ್ದೇಶದಿಂದ ರಸ್ತೆ ತಡೆಯುವ ಕೆಲಸ ಮಾಡುತ್ತಿದ್ದಾರೆ. ಈ ಬಜೆಟ್ ಅಧಿವೇಶನ ಮುಗಿದ ತಕ್ಷಣ ನಾವು 224 ಜನ. ಸಚಿವರು ಸದಸ್ಯರೆಲ್ಲರನ್ನು ದೆಹಲಿಗೆ ಕರೆದುಕೊಂಡು ಹೋಗುತ್ತೇನೆ ಬನ್ನಿ. 224 ಜನರು ಜೊತೆಗೆ ಹೋಗೋಣ. ನಮ್ಮ ರಾಜ್ಯ ಸರ್ಕಾರದ ಜವಾಬ್ದಾರ ಏನು? ಕೇಂದ್ರ ಸರ್ಕಾರದ ಜವಾಬ್ದಾರಿ ಏನು? ರಸಗೊಬ್ಬರವನ್ನು ಎಲ್ಲಿಂದ ತಂದು ಕೊಡಬೇಕು? ಹತ್ತು ಬಾರಿ ವಿನಂತಿ ಮಾಡಿದ ಮೇಲೂ ನಮಗೆ ಸಲ್ಲಬೇಕಾದ ರಸಗೊಬ್ಬರವನ್ನು ಕಳುಹಿಸಿಕೊಡದೆಯೇ ಇವತ್ತು ಮಳೆ ಬಿದ್ದಾಗ ಹಾಹಾಕಾರ ಪ್ರಾರಂಭವಾಗಿದೆ. ದೇವರ ದಯೆಯಿಂದ ನಿನ್ನೆಯಿಂದ ಮಳೆ ಆಗುತ್ತಿದೆ. ಇನ್ನು ಒಳ್ಳೆಯ ಮಳೆ ಆಗುತ್ತದೆ ಎಂಬ ವಾತಾವರಣ ಇದೆ. ಈ ಸಮಯದಲ್ಲಿ ಬಿತ್ತನೆ ಕೆಲಸ ಪ್ರಾರಂಭವಾಗಬೇಕು. ರಸಗೊಬ್ಬರ ದಾಸ್ತಾನು ಇಲ್ಲ. ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ನಮಗೆ ನೆರವನ್ನು ಕೊಡಲು ನೀವೆಲ್ಲ ಒಟ್ಟಾಗಿ ನಮ್ಮೊಂದಿಗೆ ಬನ್ನಿ. ನಾಲ್ಕಾರು ಜನ ಬೇಡ ಎಂದರೆ 224 ಜನರೂ ಬನ್ನಿ. ಸಚಿವರು ನೀವೆಲ್ಲ ಒಟ್ಟಾಗಿ ನಮ್ಮೊಂದಿಗೆ ಬನ್ನಿ. ಅವರು ಸಚಿವರಾಗಿರುವುದು ಶಾಸಕರಾದ ಮೇಲೆ ತಾನೆ. 224 ಜನರನ್ನು ದೆಹಲಿಗೆ ಕರೆದುಕೊಂಡು ಹೋಗುತ್ತೇನೆ. ನಮಗೆ ಎರಡು ಮೂರು ಸಮಸ್ಯೆ ಇದೆ. ಪೆಟ್ರೋಲ್. ಡೀಸೆಲ್ ಸಮಸ್ಯೆ ಇದೆ. ಈಗ ಮಳೆಯಾಗುತ್ತಿದೆ. ಮಾನ್ಯ ಬಾಲಕೃಷ್ಣರವರೆ. ತಾವು ಹೇಳಿದಂತೆ ನಾಳೆಯಿಂದ ಇನ್ನು ಹಚ್ಚು ಸಮಸ್ಯೆ ಆಗುತ್ತದೆ. ಶಾಸಕರು ಸಹಕಾರ ಕೊಡದಿದ್ದರೆ ರೈತರು ಬೀದಿಗೆ ಇಳಿದರೆ ಈ ಪರಿಸ್ಥಿತಿಯಲ್ಲಿ ನಾವು ಏನು ಮಾಡುಬೇಕು? ಸ್ಟಾಕ್ ಇದ್ದು ವಿತರಣೆ

ಮಾಡದಿದ್ದರೆ. ನಮ್ಮ ಕಡೆಯಿಂದ ಏನಾದರೂ ಲೋಪದೋಷ ಇದ್ದರೆ ನೀವು ದಯಮಾಡಿ ಹೇಳಿ. ಕೃಷಿ ಸಚಿವರು ಎಷ್ಟು ಬರಬೇಕಾಗಿತ್ತು. ಎಷ್ಟು ಬಂದಿದೆ ಎಂದು ಅಂಕಿ ಅಂಶ ಕೊಟ್ಟರು. ಇಷ್ಟು ದೊಡ್ಡ ಪ್ರಮಾಣದಲ್ಲಿ ರಸಗೊಬ್ಬರ ಬಾರದಿದ್ದರೆ ನನಗೆ ಬೇರೆ ಮಾರ್ಗ ಇಲ್ಲ. ಚಳುವಳಿ ಮಾಡಬೇಕಾದರೆ ನಾನೂ ರೈತರ ಜೊತೆ ಚಳುವಳಿಗೆ ನಿಂತುಕೊಳ್ಳಬೇಕಾಗುತ್ತದೆ. ನನಗೇನು ಬೇರೆ ದಾರಿ ಇಲ್ಲ. ನಾವೂ ಸತ್ಯಾಗ್ರಹ ಮಾಡಬೇಕಾಗುತ್ತದೆ. ನಾನು ಸರ್ಕಾರದ ಮುಖ್ಯಮಂತ್ರಿಯಾಗಿ ಹೇಳುತ್ತಿದ್ದೇನೆ. ನೀವೆಲ್ಲರೂ ಸಹಕಾರ ಕೊಡಿ. 30ನೇ ತಾರೀಖು ಬಜೆಟ್ ಆದಮೇಲೆ 224 ಜನರೂ ದೆಹಲಿಗೆ ಹೋಗಿ ಅಲ್ಲೇ ಕುಳಿತುಕೊಳ್ಳೋಣ. ಅವರು ಏನು ಮಾಡಬೇಕೋ ಆ ವ್ಯವಸ್ಥೆ ಮಾಡಿದರೆ ನಾನು ವಾಪಾಸ್ ಬರಲು ಸಿದ್ದನಾಗಿದ್ದೇನೆ. ದಯಮಾಡಿ ಪ್ರತಿಪಕ್ಷದವರು. ಆಡಳಿತ ಪಕ್ಷ ಎಂದು ಭೇದಭಾವ ಮಾಡಬೇಡಿ. ನಾವೆಲ್ಲ ಒಟ್ಟಾಗಿ ಹೋಗೋಣ. ನೀವು ಏನು ಪತ್ರ ಇದೆಯೆಂದು ಹೇಳಿದ್ದೀರಿ. ನಾನು ಈಗಲೇ ನಿಮ್ಮ ಜೊತೆ ಡ್ರಾಫ್ಟ್ ತೆಗೆದುಕೊಂಡು ಬರುತ್ತೇನೆ. ನಾಳೆ ಬೆಳಿಗ್ಗೆಯೇ 250 ಕೋಟಿ ರೂಪಾಯಿಯ ಡ್ರಾಫ್ಟ್ ಕೊಡುತ್ತೇನೆ. ಅದು ಇಲ್ಲಿ ಗೊಬ್ಬರ ಕೊಡಿಸುತ್ತೀರೋ ಕೊಡಿಸಿ ನಿಮ್ಮ ಜೊತೆಯಲ್ಲಿ ಬರುತ್ತೇನೆ. I am ready

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಭಾವನಾತ್ಮಕವಾಗಿ ಹೇಳುವುದರಿಂದ.

ಶ್ರೀ ಬಿ.ಎಸ್. ಯಡಿಯೂರಪ್ಪ : ಭಾವನಾತ್ಮಕವಾಗಿ ಅಲ್ಲ. ನಾವು ಸತ್ಯಸಂಗತಿಯನ್ನು ಈ ರಾಜ್ಯದ ಜನರಿಗೆ ಹೇಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : Emotionally ಮಾತನಾಡಿ ಈ ಸಮಸ್ಯೆಯನ್ನು ನಾನು ಬಗೆಹರಿಸುತ್ತೇನೆ ಅಥವಾ ನನ್ನ ಮೇಲೆ ಬರತಕ್ಕ ಆಪಾದನೆಯನ್ನು ತಳ್ಳಿಹಾಕುತ್ತೇನೆ ಎಂದು ನೀವು ಹೇಳಿದರೆ ಅದು ಸಾಧ್ಯವಿಲ್ಲ. ಅವರು ಸ್ಪಷ್ಟವಾಗಿ ಕೇಳಿದ್ದೇನೆಂದರೆ ಯಾರು ಅಡ್ವಾನ್ಸ್ ಕೊಟ್ಟಿದ್ದಾರೋ ಮಾರ್ಕೆಟಿಂಗ್ ಫೆಡರೇಷನ್ ಮೂಲಕ. ಮಹಾರಾಷ್ಟ್ರದವರು 150 ಕೊಟ್ಟಿದ್ದಾರೆ. ಆ ರೀತಿ ಅಡ್ವಾನ್ಸ್ ಕೊಟ್ಟಮೇಲೆ ಅವರು ಮಾರ್ಕೆಟಿಂಗ್ ಫೆಡರೇಷನ್‌ನವರು ಸಹ ಫಂಡ್ ರೈಸ್ ಮಾಡಿ ಹೆಚ್ಚಿನ ಹಣ ಕೊಟ್ಟವರಿಗೆ naturally ಗೊಬ್ಬರವನ್ನು ಕೊಟ್ಟಿದ್ದಾರೆ. ನೀವು ಈಗ ಎಲ್ಲೋ ತೆಗೆದುಕೊಳ್ಳಿ 250 ಕೋಟಿ ಡ್ರಾಫ್ಟ ಕೊಡುತ್ತೇನೆ ಎಂದು ಹೇಳಿವವರು ಅವರು 50 ಕೋಟಿ ಕೇಳಿದ್ದರೆ 8 ಕೋಟಿಯನ್ನು ಮಾತ್ರ ಏಕೆ ಕೊಟ್ಟಿರಿ? ಅವರು ಕೃಷಿ ಇಲಾಖೆಯವರಿಗೆ ಕೇಳಿದ್ದಾರೆ. ನಿಮ್ಮನ್ನೇ ಕೇಳಬೇಕೆಂದು ಇಲ್ಲವಲ್ಲ? ಸಂಬಂಧಪಟ್ಟ ಕೃಷಿ ಸಚಿವರಿಗೆ. ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದು 50 ಕೋಟಿ ಕೊಡಿ ಎಂದರೆ ನೀವು ಕೊಡುವುದೇ 17 ಕೋಟಿ ಎಂದು ಹೇಳಿ ಅನಂತರ ಅದರಲ್ಲೂ

ಕೇವಲ 8 ಕೋಟಿ ಕೊಟ್ಟಿದ್ದೀರಿ. ಆದ್ದರಿಂದ ಇದನ್ನು ಕೆಣಕುವುದು ಬೇಡ. ನಮ್ಮ ಕಡೆ ಕೆಣಕಿ ಕ್ಯಾರ್‌ನಲ್ಲಿ ಹಾಕಿಕೊಳ್ಳಬಾರದು ಎಂದು ಹೇಳುತ್ತಾರೆ. ಹಾಕಿದರೆ ಮೈತುಂಬ ಹುಣ್ಣಾಗುತ್ತದಂತೆ. ಆ ರೀತಿ ಮಾಡಿಕೊಳ್ಳಲು ಹೋಗಬೇಡಿ. ತಪ್ಪಾಗಿದ್ದರೆ ಸರಿಪಡಿಸಿ. ಆ ದಿವಸ 500 ಕೋಟಿಯ ಡ್ರಾಫ್ಟ್ ಕೊಡುತ್ತೇನೆ. ತೆಗೆದುಕೊಂಡು ಹೋಗಿ ಎಂದು ಹೇಳದ್ದೀರಿ. ಇಲ್ಲಿ 50 ಕೋಟಿ ಕೇಳಿದ್ದರೆ 17 ಕೋಟಿ ಕೊಡುತ್ತೇನೆಂದು ಅದನ್ನೂ ಕೊಡಲಿಲ್ಲ. ಆದ್ದರಿಂದ ಇನ್ನೂ ಮೇಲಾದರೂ ಸಂಬಂಧಪಟ್ಟವರನ್ನು ಕರೆಸಿ ಮಾರ್ಕೆಟಿಂಗ್ ಫೆಡರೇಷನ್‌ರವರನ್ನು ಕರೆಯಿಸಿ. ಕೃಷಿ ಸಚಿವರು ಮತ್ತು ಕಾರ್ಯದರ್ಶಿಯವರನ್ನು ಕೂರಿಸಿ ಬಗೆಹರಿಸಿ ಎಂದು ಹೇಳಿ. ಅನೇಕ ಸಾರಿ ನಿಮ್ಮ ಗಮನಕ್ಕೂ ಬಾರದಿರಬಹುದು ಅಥವಾ ನೀವು busy ಇದ್ದಲ್ಲಿ ತೆಗೆದುಕೊಳ್ಳದೇ ಇರಬಹುದು. ಆದರೆ. ಸಂಬಂಧಪಟ್ಟ ಇಲಾಖೆಯವರು ಏನು ಮಾಡುತ್ತಾರೆ? they should do it.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ ತಾಳಿ. ನನಗೆ ಆ ಪತ್ರದ ಪ್ರತಿಯನ್ನಾದರೂ ಕಳುಹಿಸಿ ಕೊಡಿ. ಆ ಪತ್ರದ ಪ್ರತಿ ಕಳುಹಿಸಿ ಕೊಡದೇ ನೀವು ಹೀಗೆ ಮಾತನಾಡಿದರೆ ಹೇಗೆ? ನನಗೆ ಅದರ ಪ್ರತಿ ಕಳುಹಿಸಿ ಕೊಡಿ.

ಅಧ್ಯಕ್ಷರು ; ಅದರ ಪ್ರತಿ ಕಳುಹಿಸಿ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾನು ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ದಿನಾಂಕ 8–7–08 ರಲ್ಲಿ 17 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರ ಆದೇಶ ಮಾಡಿದೆಯೋ ಇಲ್ಲವೋ? ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಅದರಲ್ಲಿ ಸಹಕಾರ ಮಾರಾಟ ಮಹಾ ಮಂಡಲಕ್ಕೆ ಒಂದು ಕಾಸನ್ನೂ ಬಿಡುಗಡೆ ಮಾಡಿಲ್ಲ. ಈ ರೀತಿಯಾಗಿ ಅಧಿಕಾರಿಗಳು ತಪ್ಪು ಮಾಹಿತಿ ಸದನಕ್ಕೆ ಕೊಟ್ಟು ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ನಾನು ವಿನಂತಿಸುತ್ತೇನೆ ಮತ್ತು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಪತ್ರವನ್ನು ಕಳುಹಿಸಿ ಕೊಡುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸಹಕಾರಿ ಮಾರಾಟ ಮಹಾ ಮಂಡಲದ ಅಧಿಕಾರಿಯನ್ನು ಇವತ್ತು ಮಧ್ಯಾಹ್ನ ಕರೆಸುತ್ತೇನೆ. ರಸಗೊಬ್ಬರ ಎಲ್ಲಿಯಾದರೂ ಕೊಡಿಸುತ್ತೇವೆಂದು ಹೇಳಿದರೆ ಇವತ್ತೇ ನಾನು ಅವರಿಗೆ 250 ಕೋಟಿ ರೂಪಾಯಿಯ ಡ್ರಾಫ್ಟ್ ಕೊಡುವುದಕ್ಕೆ ನಾನು ಸಿದ್ದನಿದ್ದೇನೆ. ಒಬ್ಬ ಮುಖ್ಯಮಂತ್ರಿಯಾಗಿ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಹೋದ ಸಾರಿ ಚರ್ಚೆಯಾಗುವ ಸಂದರ್ಭದಲ್ಲಿ 500

ಕೋಟಿ ಕೊಡುತ್ತೇನೆಂದು ಇಲ್ಲಿ ಹೇಳಿದ್ದು ನಿಜ. ನಾವು ಇಲ್ಲವೆಂದು ಹೇಳುತ್ತಿಲ್ಲ. ಆದರೆ. ಕಳೆದ ಒಂದು ವಾರದಿಂದಲೂ ಸಂಪರ್ಕ ಮಾಡುತ್ತಿರಬೇಕಾದರೆ. ಯಾವುದೇ ಕಾರಣಕ್ಕೂ ನಿಮ್ಮ marketing Federations ಮೂಲಕ ನೀವು ಗೊಬ್ಬರ ತರಿಸಿಕೊಳ್ಳುವುದಕ್ಕೆ ಬರುವುದಿಲ್ಲ. ನಾವು ಕೊಡುವುದಿಲ್ಲ. ನಾವೇನು ನಮ್ಮ ಕಡೆಯಿಂದ supply ಮಾಡುತ್ತಿದ್ದೇವೆ. ಇದು ಮಾತ್ರ ಸಾಧ್ಯವೆಂದು ಸ್ಪಷ್ಟವಾಗಿ Fertilizer Minister ರವರು ಅಧಿಕಾರಿಗಳ ಜೊತೆ ಮಾತನಾಡುವಂಥ ಕಾಲದಲ್ಲಿ ನಮಗೆ ಹೇಳಿದ್ದಾರೆ. ಇವತ್ತು ನೀವು ಬನ್ನಿ.. Marketing Federations ಅಧಿಕಾರಿಗಳನ್ನು ಕರೆದಾಗ ನಿಮ್ಮನ್ನೂ ಕರೆಯುತ್ತೇನೆ. ಏಕೆಂದರೆ. ಈ ಸಮಸ್ಯೆ ಯಾರೋ ಒಂದು ಪಕ್ಷದ್ದಲ್ಲ. ಇಡೀ ರಾಜ್ಯದ ರೈತನ ಪ್ರಶ್ನೆ. ಅದಕ್ಕೆ ನೆರವು ಕೊಡುವುದು ನಮ್ಮ ಕರ್ತವ್ಯ. ರೈತನಿಗೆ ಏನೇನು ನೆರವು ಕೊಡುವುದಕ್ಕೆ ಸಾಧ್ಯವಿದೆಯೋ ಬಹುಶಃ ಸ್ವಾತಂತ್ರ್ಯ ಬಂದ ಮೇಲೆ ಈ ದೇಶದ ಯಾವುದೇ ರಾಜ್ಯದಲ್ಲಿ ಯಾರೂ ಮಾಡಲಾರದಷ್ಟು ಸವಲತ್ತನ್ನು ಶಕ್ತಿಮೀರಿ ಪ್ರಾಮಾಣಿಕವಾಗಿ ನಾನು ಮಾಡಿದ್ದೇನೆ. ನಾನು ಪ್ರತಿ ಪಕ್ಷದ ನಾಯಕರನ್ನು ಕರೆಯುತ್ತೇನೆ. ಅವರು ಹೇಳಿದರೆ ಇವತ್ತೇ ನಾನು ಚೆಕ್ ಕೊಡುತ್ತೇನೆ. ನಮಗೆ ಗೊಬ್ಬರ ಕೊಡಲಿ. ಇಲ್ಲದಿದ್ದರೆ ಒಂದು ವಾರಕ್ಕೆ ಕೊಡಲಿ. ತೊಂದರೆಯಿಲ್ಲ. ಇವತ್ತೇ ನಾನು ಮಾತನಾಡುತ್ತೇನೆ. ನಿಮ್ಮನ್ನೂ ಅಲ್ಲಿಗೆ ಕರೆಯುತ್ತೇನೆ. ನೀವು ಯಾರ್ಯಾರು ಆ ಮಹಾ ಮಂಡಲದಲ್ಲಿ ಕೆಲಸ ಮಾಡುತ್ತಿದ್ದೀರಿ. ನಿಮಗೆ influence ಇದೆ. ನೀವೂ ಬನ್ನಿ. ನಾನು ದುಡ್ಡು ಕೊಡುವುದಕ್ಕೆ ಸಿದ್ದನಿದ್ದೇನೆ. ಗೊಬ್ಬರ ತರಿಸೋಣ. ರೈತರನ್ನು ಉಳಿಸೋಣ. ಭಗವಂತನ ದಯೆಯಿಂದ ಮಳೆ ಬೀಳುತ್ತಿದೆ. ಬಿತ್ತನೆಯಾಗಬೇಕಾಗಿದೆ. ರೈತ ನೆಮ್ಮದಿಯಿಂದ ಬದುಕಬೇಕಾಗಿದೆ. ಇದಕ್ಕೆ ಏನು ಸಹಕಾರ ಕೊಡಬೇಕೋ ಅದು ನನ್ನ ಕರ್ತವ್ಯ ಎಂದು ತಿಳಿದುಕೊಂಡು ಅದನ್ನು ನಾನು ಮಾಡುವುದಕ್ಕೆ ಸಿದ್ದನಿದ್ದೇನೆ. ಮಧ್ಯಾಹ್ನ ನಿಮ್ಮನ್ನು ಕರೆಯುತ್ತೇನೆ. ನಾನು ಈಗಲೇ ಮಧ್ಯಾಹ್ನ ಅಧಿಕಾರಿಗಳನ್ನು ಕರೆಸುವುದಕ್ಕೆ ಸೂಚನೆ ಕೊಡುತ್ತೇನೆ. ನಿಮ್ಮನ್ನು ಕರೆದು ನಿಮ್ಮ ಸಮಕ್ಷಮದಲ್ಲಿ ನಾನು ಮಾತನಾಡುತ್ತೇನೆ. ಅಗತ್ಯವಿದ್ದರೆ ಇವತ್ತೇ ಹಣವನ್ನು ಬಿಡುಗಡೆ ಮಾಡುತ್ತೇನೆ.

ಅಧ್ಯಕ್ಷರು : ಆಯಿತು ಬಿಡಿ. ಮುಂದಿನ ಪ್ರಶ್ನೆ. ಹ್ಯಾರಿಸ್ ನೀವು ಪ್ರಶ್ನೆ ಕೇಳಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : 17 ಕೋಟಿ ಕೊಡುತ್ತೇನೆಂದು ಹೇಳಿದ ಸರ್ಕಾರದಿಂದ ಒಂದು ಕಾಸನ್ನೂ ಬಿಡುಗಡೆ ಮಾಡಿಲ್ಲ. ಮೊದಲು ಹಣ ಬಿಡುಗಡೆ ಮಾಡಿ.

ಅಧ್ಯಕ್ಷರು : ಸಾಕು ಬಿಡಿ. ಇದು ಸಾಕಷ್ಟು ಸಮಯವಾಗಿದೆ. ಹ್ಯಾರಿಸ್ ಅವರು ಇಲ್ಲ. ಮುಂದಿನ ಪ್ರಶ್ನೆ ಹೆಚ್.ಕೆ.ಕುಮಾರಸ್ವಾಮಿಯವರೆ ಕೇಳಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಇದು ತುಂಬಾ ಗಂಭೀರವಾದ ಪ್ರಶ್ನೆ.

ಅಧ್ಯಕ್ಷರು : ಕೃಷ್ಣಮೂರ್ತಿಯವರೆ. ಎಲ್ಲದನ್ನೂ ಈ ಪ್ರಶ್ನೋತ್ತರದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನೀವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಎಲ್ಲವನ್ನು ಬಜೆಟ್ ಮೇಲೆ ಮಾತನಾಡುವುದಕ್ಕೆ ಆಗುವುದಿಲ್ಲ. ಮುಖ್ಯಮಂತ್ರಿಗಳು ಹೇಳಿದರೂ ಎಷ್ಟು ದಿವಸದಲ್ಲಿ ಕೊಡುತ್ತಾರೆಂಬುದು ಬೇಕಲ್ಲ. ಇಲ್ಲಿ ಉತ್ತರ ಕೊಡುವಾಗ ತಪ್ಪು ಉತ್ತರ ಕೊಟ್ಟು ನಂತರ ಹೀಗೆ ಹೇಳಿದರೆ ಹೇಗೆ?

ಅಧ್ಯಕ್ಷರು ; ಇಲ್ಲ. ಇಲ್ಲ. ಇದು ಪ್ರಶ್ನೋತ್ತರ. ಅಂದರೆ ಅಷ್ಟನ್ನು ಮಾತ್ರ ಕೇಳಬೇಕು. ಕುಮಾರಸ್ವಾಮಿಯವರೇ ಪ್ರಶ್ನೆ ಕೇಳಿ.